ಶ್ರೀ ಬಿ. ಡಿ. ಜತ್ತಿ.—ಹೋದ ಸಾರಿಯ ಈ ಶಾಸನಸಭಾ ಅಧಿವೇಶನದಲ್ಲಿ ಇಂತಹುದೇ ಒಂದು ವಿಚಾರದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡು ಬಂದು ತಮ್ಮಂತಹವರೇ ವಿಚಾರ ಮಾಡ ಬೇಕೆಂದು ಹೇಳಿದ್ದೀರಿ. ಇವೊತ್ತಿನ ದಿವಸ ಮಾನ್ಯ ಸದಸ್ಯರಾದ ಶ್ರೀಮಾನ್ ರೇವಣ್ಣಸಿದ್ದಪ್ಪನಂತಹ ವರು ಪುನಃ ಇದನ್ನು ಚರ್ಚೆ ಮಾಡಿ ಇಂತಹುದನ್ನು ಮಾಡಬಾರದು ಎಂಡು ನಿರ್ಣಯ ತಂದರೆ ಬಿಟ್ಟು ಬಿಡೋಣ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

QUESTION FOR ANSWER ON THE DAY

(but not taken up)

Constitution of a Committee other than the Anti-Corruption Department

*Q.—168. Sri E. NARAYANA GOWDA (Bangarpet).—

Will the Government be pleased to state :—

whether they intend to constitute a committee other than the Anti-Corruption Department under the Chairmanship of a retired High Court Judge as has been done by the Government of India to prevent corruption and to increase efficiency in the administration ?

A.—Sri S. NIJALINGAPPA (Chief Minister).—

The question of constituting a Vigilance Commission is under consideration of Government.

Member's Representation.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆ, ಶ್ರೀ ಬಿ. ಡಿ. ಜತ್ತಿಯವರೇ ಮುಖ್ಯಮಂತ್ರಿ ಗಳಾಗುತ್ತಾರೆಂದೂ, ಈ ಕ್ಯಾಬಿನೆಟ್ ರೀಷಫರ್ ಆಗುತ್ತದೆಂದು ವರ್ತಮಾನ ಬಂದಿದೆ.....

Mr. SPEAKER.—I have no information.

BUDGET ESTIMATES FOR 1964-65

General discussion—(*contd.*)

9-30 A.M.

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಅಧ್ಯಕ್ಷರೇ, ಈ ದಿವಸ ದೇಶದಲ್ಲಿ ಭಾರೀ ಪ್ರಮಾಣದ ನೀರಾವರಿ ಯೋಜನೆಗಳ ವರ್ಗಕ್ಕೆ ಸೇರಿರತಕ್ಕ ಡ್ಯಾಮುಗಳ ಪೈಕಿ ಒಂದಾದ ನಾರಾಯಣಪುರ ಮತ್ತು ಆಲಮಟ್ಟಿ ಡ್ಯಾಮುಗಳ ವಿಚಾರದಲ್ಲಿ ಒಂದು ದೊಡ್ಡ ಗೊಂದಲವೆದ್ದು ಈ ಹಿಂದೆ ಆ ಹಾರಂಗಿ ಮತ್ತು ಕಂಬದಕಡ ಡ್ಯಾಮುಗಳ ಬಗ್ಗೆ ಏನೊಂದು ಪರಿಸ್ಥಿತಿಯುಂಟಾಗಿತ್ತೋ ಅದೇ ಪರಿಸ್ಥಿತಿ ಈ ದಿವಸ ಇಲ್ಲಿಯೂ ಉಂಟಾಗುವಂತೆ ನಮಗೆ ಭಾಸವಾಗುತ್ತಿದೆ. ಈ ಬಗ್ಗೆ